**ಅತ್ಯಾಧ್ಯತೆ**

# ಸರ್ವ ಶಿಕ್ಷಣ ಅಭಿಯಾನ-ಕರ್ನಾಟಕ

## ಹೊಸ ಸಾರ್ವಜನಿಕ ಕಚೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ;ಸಶಿಅ/ಇಸಿಸಿಇ/2010-11 ದಿನಾಂಕ:24.05.2010

**ಸುತ್ತೋಲೆ**

**ವಿಷಯ:-** 2010-11ನೇ ಸಾಲಿನಲ್ಲಿ ಇ.ಸಿ.ಸಿ.ಇ ಚಟುವಟಿಕೆ ಅಡಿಯಲ್ಲಿ ಎಲ್ಲಾ ಜಿಲ್ಲೆಯ ಶಾಲಾ ಪೂರ್ವ ಶಿಕ್ಷಣ ಕೇಂದ್ರಗಳ (ಬೆಂಗಳೂರು ನಗರ ಹೊರತುಪಡಿಸಿ) ಅನುಷ್ಠಾನ ಕುರಿತಂತೆ ಸುತ್ತೋಲೆ.

**ಉಲ್ಲೇಖ:** ಕೇಂದ್ರ ಸಾರ್ಕಾರದ ಪಿ.ಎ.ಬಿ ಅಪ್ರೈಸಲ್ ವರದಿ AWP & B 2009-10

2010-11ನೇ ಸಾಲಿನಲ್ಲಿ ಆವಿಷ್ಕೃತ ಚಟುವಟಿಕೆ ಅಡಿಯಲ್ಲಿ ಪೂರ್ವ ಪ್ರಾಥಮಿಕ ಶಾಲಾ ಮಕ್ಕಳ ಅಭಿವೃದ್ಧಿಗಾಗಿ ಪ್ರತಿ ಜಿಲ್ಲೆಗೆ ತಲಾ ರೂ 15 ಲಕ್ಷದಂತೆ ಒಟ್ಟು ರೂ 450.00 ಲಕ್ಷ ರೂಗಳನ್ನು ನಿಗಧಿಪಡಿಸಲಾಗಿದೆ. ಈ ಮೊತ್ತದಲ್ಲಿ ರೂ 232.5 ಲಕ್ಷ ರೂಗಳನ್ನು ಶೂನ್ಯ ತರಗತಿ ಕೇಂದ್ರಗಳ ನಿರ್ವಹಣೆಗಾಗಿ ನಿಗಧಿಗೊಳಿಸಲಾಗಿದೆ. ಹಾಗೂ ಈ ಉಳಿದಂತೆ 29 ಜಿಲ್ಲೆಗಳ(ಬೆಂಗಳೂರು ನಗರ ಹೊರತುಪಡಿಸಿ) ಅನುದಾನದ ರೂ. 7.5ಲಕ್ಷಗಳನ್ನು ಈ ಚಟುವಟಿಕೆಗೆ ಮೀಸಲಿರಿಸಿದೆ. ಸದರಿ ಚಟುವಟಿಕೆಗೆ ಕಡ್ಡಾಯವಾಗಿ 4 ವರ್ಷದಿಂದ 5.10 ವಯೋಮಾನದ ಮಕ್ಕಳನ್ನು ಮಾತ್ರವೇ ಗುರುತಿಸಿ, ಕನಿಷ್ಠ 25 ಮಕ್ಕಳು ಒಂದು ಕೇಂದ್ರದಲ್ಲಿ ಕಲಿಯುವ ವ್ಯವಸ್ಥೆಯನ್ನು ಮಾಡುವುದು. ಸದರಿ ಕೇಂದ್ರಗಳಿಗೆ ಮಕ್ಕಳನ್ನು ಗುರುತಿಸುವಾಗ ಕಡ್ಡಾಯವಾಗಿ ಶಾಲೆಯಿಂದ ಹೊರಗಿರುವ ಮಕ್ಕಳ ಸಿಬ್ಲಂಗ್ ಮಕ್ಕಳನ್ನು(ತಂಗಿ ತಮ್ಮಂದಿರು), ಚಿಣ್ಣರ ಅಂಗಳ ಹಾಗೂ ಇತರೆ (ಎ.ಐ.ಇ) ಸೇತುಬಂಧ ಕೇಂದ್ರಗಳ ಅಡಿಯಲ್ಲಿ ದಾಖಲಾದ ಮಕ್ಕಳ, 4 ರಿಂದ 5.10 ವಯೋಮಾನದ ಸಿಬ್ಲಂಗ್ಸ್ ಅನ್ನು ಹಾಗೂ ಸಮಗ್ರ ಮಕ್ಕಳ ಗಣತಿಯಲ್ಲಿ 4 ರಿಂದ 5.10 ವಯೋಮಾನದ ಅಂಗನವಾಡಿ ಅಥವಾ ಯಾವುದೇ ಪೂರ್ವ ಪ್ರಾಥಮಿಕ ಶಾಲೆಗಳಿಗೆ ದಾಖಲಾಗದ ಮಕ್ಕಳನ್ನು ಮಾತ್ರವೇ ಈ ಚಟುವಟಿಕೆಗೆ ಗುರುತಿಸುವುದು. ಇದಲ್ಲದೆ ಪ್ರಮುಖವಾಗಿ, ಕಡಿಮೆ ವಯಸ್ಸಿನ ಮಕ್ಕಳು 1ನೇ ತರಗತಿಗೆ ದಾಖಲಾಗುತ್ತಿರುವ ಪ್ರಮಾಣ ಬೆಂಗಳೂರು ನಗರದ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಾಗಿ ಕಂಡು ಬಂದಿರುವುದರಿಂದ ಅಂತಹ ಮಕ್ಕಳನ್ನು ಈ ಚಟುವಟಿಕೆಯ ವ್ಯಾಪ್ತಿಗೆ ತರುವುದು.

2010-11ನೇ ಸಾಲಿನಲ್ಲಿ ಈ ಚಟುವಟಿಕೆಯನ್ನು ಆರ್.ಟಿ.ಇ. ಸೆಕ್ಷನ್ 11ರ ಅಡಿಯಲ್ಲಿ ಪೂರ್ವ ಪ್ರಾಥಮಿಕ ಶಾಲಾ ಚಟುವಟಿಕೆಗಳನ್ನು ಸಬಲಗೊಳಿಸುವ ಅಗತ್ಯವಿದ್ದು, ಸದರಿ ಚಟುವಟಿಕೆಯ ಅನುಷ್ಠಾನಕ್ಕೆ ಈ ಕೆಳಕಂಡ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

(ಆರ್.ಟಿ.ಇ. ಸೆಕ್ಷನ್ 11: ಸಮುಚಿತ ಸರ್ಕಾರ ಶಾಲಾ ಪೂರ್ವ ಶಿಕ್ಷಣ ಒದಗಿಸುವುದು:- ಮೂರು ವರ್ಷಗಳಿಗೂ ಮೇಲ್ಪಟ್ಟ ವಯಸ್ಸಿನ ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕಾಗಿ ಸಿದ್ಧಗೊಳಿಸುವ ದೃಷ್ಟಿಯಿಂದ ಮತ್ತು ಮಕ್ಕಳು ಆರು ವರ್ಷಗಳ ವಯಸನ್ನು ಪೂರೈಸುವವರೆಗೆ ಅವರಿಗೆ ಎಳೆ ವಯಸ್ಸಿನ ಆರೈಕೆ ದೊರಕಿಸಿ ಅವರಿಗೆ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಸಮುಚಿತ ಸರ್ಕಾರವು ಅಂಥ ಮಕ್ಕಳಿಗಾಗಿ ಉಚಿತ ಶಾಲಾ ಪೂರ್ವ ಶಿಕ್ಷಣ ಒದಿಗಿಸುವುದಕ್ಕಾಗಿ ಅಗತ್ಯ ವ್ಯವಸ್ಥೆ ಮಾಡಬಹುದು)

**1. ಇ.ಸಿ.ಸಿ.ಇ ಕೇಂದ್ರಗಳ ಹೆಸರು: ಶಾಲಾ ಪೂರ್ವ ಶಿಕ್ಷಣ ಕೇಂದ್ರ** ( 'ಶೂನ್ಯ ತರಗತಿ' ಎಂಬ ಹೆಸರನ್ನು ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ಬದಲಿಸಿದೆ)

**2. ನಿರ್ವಹಣೆ :** ಸ್ವಯಂ ಸೇವಕ ಸಂಘದ ಸಹಕಾರದೊಂದಿಗೆ, ಈ ಕೇಂದ್ರಗಳು ಇರುವಂತಹ ಪ್ರತಿ ಸರ್ಕಾರಿ ಶಾಲಾ ಶಾಲಾ ಮುಖ್ಯ ಶಿಕ್ಷಕರು(ಹಿ.ಪ್ರಾ.ಶಾ/ಕಿ.ಪ್ರಾ.ಶಾ). ಬ್ಲಾಕ್ ಹಂತದಲ್ಲಿ ಬಿ.ಆರ್.ಸಿ ಗಳ ಉಸ್ತುವಾರಿಯಲ್ಲಿ ಆಡಳಿತಾತ್ಮಕ ಸಹಕಾರ ಮತ್ತು ಪೋಷಣೆ ಹಾಗೂ ಪೂರ್ಣ ಜವಾಬ್ದಾರಿ.

**3. ಕೇಂದ್ರಗಳ ಅಭಿವೃದ್ಧಿ:** ಈ ಕೇಂದ್ರಗಳ ಶೈಕ್ಷಣಿಕ ಅಭಿವೃದ್ಧಿ ಜಿಲ್ಲಾ ಹಂತದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯದ್ದು. ಈ ಕೇಂದ್ರಗಳ ತರಬೇತಿ ಹಾಗೂ ಮಾಡ್ಯಲ್ ಅಭಿವೃದ್ಧಿ ಹಾಗೂ ಶೈಕ್ಷಣಿಕ ಮಾರ್ಗದರ್ಶನ ಆಯಾ ಜಿಲ್ಲಾ ಹಂತದಲ್ಲಿ ಭಾಗೀದಾರ ಸ್ವಯಂ ಸೇವಕ ಸಂಸ್ಥೆಗಳನ್ನು ಒಳಗೊಂಡಂತೆ.

**4. ಆರ್ಥಿಕ ನಿರ್ವಹಣೆ:** ರಾಜ್ಯದಿಂದ ಜಿಲ್ಲೆಗಳಿಗೆ ಅನುದಾನ ಬಿಡುಗಡೆ. ಜಿಲ್ಲಾ ಹಂತದಿಂದ ಆಯಾ ಶೈಕ್ಷಣಿಕ ವಲಯಗಳಿಗೆ ಅನುದಾನ ಬಿಡುಗಡೆ. ನಂತರದಲ್ಲಿ ವಲಯದಿಂದ ಆಯಾ ಶಾಲಾ ಪೂರ್ವ ಶಿಕ್ಷಣ ಕೇಂದ್ರಕ್ಕೆ ಅನುದಾನ ಬಿಡುಗಡೆ.

**5. ಮಕ್ಕಳ ಆಯ್ಕೆ :** 4 ವರ್ಷದಿಂದ 5.10 ವಯೋಮಾನದ ಮಕ್ಕಳನ್ನು ಮಾತ್ರವೇ ಗುರುತಿಸಿ, ಕನಿಷ್ಠ 25 ಮಕ್ಕಳು ಒಂದು ಕೇಂದ್ರದಲ್ಲಿ ಕಲಿಯುವ ವ್ಯವಸ್ಥೆಯನ್ನು ಮಾಡುವುದು. ಸದರಿ ಕೇಂದ್ರಗಳಿಗೆ ಮಕ್ಕಳನ್ನು ಗುರುತಿಸುವಾಗ ಕಡ್ಡಾಯವಾಗಿ ಶಾಲೆಯಿಂದ ಹೊರಗಿರುವ ಮಕ್ಕಳ 4 ರಿಂದ 5.10 ವಯೋಮಾನದ (ತಂಗಿ ತಮ್ಮಂದಿರು) ಹಾಗೂ ಇತರೆ ಎಐಈ/ಸೇತುಬಂಧ ಕೇಂದ್ರಗಳ ಹಾಗೂ ಚಿಣ್ಣರ ಅಂಗಳ ಅಡಿಯಲ್ಲಿ ದಾಖಲಾದ ಮಕ್ಕಳ 4 ರಿಂದ 5.10 ವಯೋಮಾನದ ಸಿಬ್ಲಿಂಗ್ಸ್ ಅನ್ನು ಹಾಗೂ ಸಮಗ್ರ ಮಕ್ಕಳ ಗಣತಿಯಲ್ಲಿ 4 ರಿಂದ 5.10 ವಯೋಮಾನದ ಅಂಗನವಾಡಿ ಅಥವಾ ಯಾವುದೇ ಪೂರ್ವ ಪ್ರಾಥಮಿಕ ಶಾಲೆಗಳಿಗೆ ದಾಖಲಾಗದ ಮಕ್ಕಳನ್ನು ಮಾತ್ರವೇ ಈ ಚಟುವಟಿಕೆಗೆ ಗುರುತಿಸುವುದು. ಇದಲ್ಲದೆ ಪ್ರಮುಖವಾಗಿ, ಕಡಿಮೆ ವಯಸ್ಸಿನ ಮಕ್ಕಳು 1ನೇ ತರಗತಿಗೆ ದಾಖಲಾಗುತ್ತಿರುವ ಪ್ರಮಾಣ ಬೆಂಗಳೂರು ನಗರದ ಸರ್ಕಾರಿ ಶಾಲೆಗಳಲ್ಲಿ ಹೆಚ್ಚಾಗಿ ಕಂಡು ಬಂದಿರುವುದರಿಂದ ಅಂತಹ ಮಕ್ಕಳನ್ನು ಈ ಚಟುವಟಿಕೆ ಅಡಿ ತರುವುದು. ಈ ಕೇಂದ್ರಗಳಿಗೆ ದಾಖಲಾದ ಮಕ್ಕಳನ್ನು ಮಾತ್ರವೇ ಕೇಂದ್ರಗಳಲ್ಲಿ ಕಲಿಯಲು ಅವಕಾಶ ಮಾಡಿಕೊಡುವುದು. ಸಾಂದರ್ಭಿಕ ಕಾರಣದಿಂದ ಕೆಲವು ತಾಯಂದಿರು ಅನ್ಯ ಕಾರ್ಯದ ಮೇಲೆ ತೆರಳುವ ಸಂದರ್ಭದಲ್ಲಿ ಮಕ್ಕಳನ್ನು ಈ ಕೇಂದ್ರಗಳಲ್ಲಿ ಬಿಟ್ಟು ಹೋಗುವುದು ಕಂಡು ಬಂದಿದ್ದು, ಅಂತಹ ಯಾವುದೇ ಈ ಕೇಂದ್ರಗಳಲ್ಲಿ ಮಕ್ಕಳಿಗೆ ಅವಕಾಶ ನೀಡಬಾರದು.

**6. ಸ್ವಯಂ ಸೇವಕ ಸಂಸ್ಥೆಯ ಸಹಕಾರ, ಕಾರ್ಯಗಳು ಹಾಗೂ ಅನುದಾನ.**

ಪ್ರತಿ ಸ್ವಯಂ ಸೇವಕ ಸಂಘಗಳಿಂದ ಗರಿಷ್ಟ 30 ಕೇಂದ್ರಗಳಿಗೆ ಸಹಕಾರ ಪಡೆಯುವುದು. ಸದರಿ ಸ್ವಯಂ ಸೇವಕ ಸಂಘಗಳಿಂದ ನರ್ಸರಿ ಶಿಕ್ಷಣ ತರಬೇತಿ ಹೊಂದಿ ಕಾರ್ಯಕರ್ತೆಯರ ನೇಮಕಾತಿ, ಸಹಾಯಕ ನೇಮಕಾತಿಗೆ ಸಂಬಂಧಿಸಿದಂತೆ ವ್ಯಕ್ತಿಗಳನ್ನು ಗುರ್ತಿಸುವುದು, ಡಯಟ್ ಮತ್ತು ಬಿ.ಆರ್.ಸಿ ಸಹಾಕಾರದೊಂದಿಗೆ ಕಾರ್ಯಕರ್ತೆಯರಿಗೆ ತರಬೇತಿ , ಪ್ಲೇ ಕಿಟ್ ಪ್ರೊಕ್ಯೂರ್ಮೆಂಟ್, ಹೆಚ್ಚುವರಿ ಪೌಷ್ಟಿಕಾಂಶಕ್ಕೆ ಸಂಬಂಧಿಸಿದಂತೆ ಆಹಾರ ಪೂರೈಕೆ ಹಾಗೂ ಈ ಕೇಂದ್ರಗಳ ಅಭಿವೃದ್ಧಿ ಕಾರ್ಯಗಳಲ್ಲಿ ಕಡ್ಡಾಯವಾಗಿ ತೊಡಗಿಸಿಕೊಳ್ಳುವುದು. ಡಿ.ಡಿ.ಪಿ.ಐ/ಡಿ.ವೈ.ಪಿ.ಸಿ. ರವರು ಸ್ವಯಂ ಸೇವಕರ ನೇಮಕಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವುದು.

**7. ಸಮಯ**

ಔಪಚಾರಿಕ ಶಾಲೆಗಳು ಕರ್ತವ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿಯೇ ಈ ತರಗತಿಗಳನ್ನು ನಿರ್ವಹಿಸುವುದು. ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದ ಆರಂಭದಿಂದಲೇ ಎಲ್ಲಾ 620 ಶೂನ್ಯ ತರಗತಿ ಕೇಂದ್ರಗಳನ್ನು ಸರ್ಕಾರಿ ಪ್ರಾಥಮಿಕ ಶಾಲೆಗಳ ಆವರಣದಲ್ಲಿನ ಪ್ರತ್ಯೇಕ ಕೊಠಡಿಯಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳುವುದು.

**8. ಹಣಕಾಸಿನ ಹಂಚಿಕೆ.**

ಕನಿಷ್ಠ 25 ಮಕ್ಕಳಿರುವ ಮಕ್ಕಳ ಒಂದು ಕೇಂದ್ರದಲ್ಲಿ ಖರ್ಚು ಮಾಡಲು ಅವಕಾಶವಿರುವ ಹಣಕಾಸಿನ ವಿವರ ಈ ಕೆಳಕಂಡಂತಿದೆ.

1. ಸ್ವಯಂ ಸೇವಕರ ಗೌರವ ದನ = ರೂ.2000.00 (ಪ್ರತಿ ತಿಂಗಳಿಗೆ)
2. ಸಹಾಯಕರ ಗೌರವ ದನ = ರೂ.1000.00 (ಪ್ರತಿ ತಿಂಗಳಿಗೆ)
3. ಪ್ಲೇ ಕಿಟ್ = ರೂ.5000.00 (ವರ್ಷಕ್ಕೆ ಒಂದು ಬಾರಿ)
4. ಸ್ಟೇಷನರಿ = ರೂ.50.00 (ಪ್ರತಿ ಮಗುವಿಗೆ ವರ್ಷಕ್ಕೆ ಒಂದು ಬಾರಿ)
5. ನಿರ್ವಹಣೆ ಮತ್ತು ಮೇಲುಸ್ತುವಾರಿ = ರೂ. 1250 ( ಪ್ರತಿ ಕೇಂದ್ರಕ್ಕೆ)
6. ಹೆಚ್ಚುವರಿ ಪೌಷ್ಠಿಕಾಂಶವುಳ್ಳ ಆಹಾರ ನೀಡಿಕೆ = ರೂ. 12500 ( ಪ್ರತಿ ಮಗುವಿಗೆ ವಾರ್ಷಿಕವಾಗಿ ರೂ. 500 ರಂತೆ)

(ಪ್ರತಿ ಕೇಂದ್ರಕ್ಕೆ ರೂ. 50000 ಮೀಸಲಿರಿಸಿದೆ)

**ರಾಜ್ಯ ಯೋಜನಾ ನಿರ್ದೇಶಕರು**
**ಸರ್ವ ಶಿಕ್ಷಣ ಅಭಿಯಾನ.**

**ಅಗತ್ಯ ಕ್ರಮಕ್ಕಾಗಿ**

1. ರಾಜ್ಯದ ಎಲ್ಲಾ ಜಿಲ್ಲೆಗಳ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಉಪನಿರ್ದೇಶಕರು (ಆಡಳಿತ) ಹಾಗೂ ಪದನಿಮಿತ್ತ ಯೋಜನಾ ಸಮನ್ವಯಾಧಿಕಾರಿಗಳು ಸರ್ವ ಶಿಕ್ಷಣ ಅಭಿಯಾನ ಹಾಗೂ ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿಗಳು, ಸ.ಶಿ.ಅ.
2. ರಾಜ್ಯದ ಎಲ್ಲಾ ಜಿಲ್ಲೆಗಳ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಪ್ರಾಂಶುಪಾಲರು ಹಾಗೂ ಪದನಿಮಿತ್ತ ಉಪನಿರ್ದೇಶಕರು (ಅಭಿವೃದ್ಧಿ)
3. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು/ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳಿಗೆ (ಬೆಂಗಳೂರು ನಗರ ಹೊರತುಪಡಿಸಿ).
4. ಈ ಕಛೇರಿಯ ಎಲ್ಲಾ ಜಿಲ್ಲೆಗಳ ನೋಡಲ್ ಅಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಬೆಂಗಳೂರು.
2. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ ಬೆಂಗಳೂರು.